ಪ್ರತಿಯೊಬ್ಬರಿಗೂ ಕೈ ಚಾಚಿ ಅವಿನಾಶನನ್ನು ನೋಡುತ್ತ, 'ಸ್ಸಾರಿ ಸರ್. ನಾನೇ ಮೊದಲು ಇಲ್ಲಿರಬೇಕಿತ್ತು' ಅಂದ. ಅವಿನಾಶ ತಾನು ಹೇಳಿದ ಸಮಯಕ್ಕಿಂತ ಎರಡು ಗಂಟೆ ತಡವಾಗಿದ್ದರಿಂದ 'ನಿಮ್ಮನ್ನು ಕಾಯುವಂತೆ ಮಾಡಿದ್ದು ನಾನು. ಸ್ಸಾರಿ ನಾನೇ ಹೇಳಬೇಕು' ಅಂದ. ವೀರೇಶನ ಬೆಳಗಿನ ಅನುಭವಗಳಿಗೂ ಪರೋಕ್ಷವಾಗಿ ಕಾರಣವಾಗಿದ್ದು ಇದೇ ಕಾಯುವಿಕೆಯೇ. ಅವಿನಾಶ ಗೆಳೆಯರೊಂದಿಗೆ ತನ್ನದೇ ಕಾರಿನಲ್ಲಿ ಬೆಂಗಳೂರಿಂದ ಬೆಳಕು ಹರಿಯುವ ಮೊದಲೇ ಹೊರಟಿದ್ದರೂ; ಹೊಸ ಜಾಗ ನೋಡುತ್ತಿರುವ ಗೆಳೆಯರಿಗೆ ನಡುನಡುವೆ ನಿಲ್ಲಿಸಿ ಕಾಲಾಡಿಸಿ ಮುಂದುವರಿಯಬೇಕಿತ್ತು. ಯುರೋಪಿನ ಗೆಳೆಯರು ಪ್ರತಿ ಸಾರಿ ಅವನು ಭಾರತಕ್ಕೆ ಹೊರಡುವಾಗಲೂ ನಮ್ಮನ್ನ ಯಾವಾಗ ಕರ್ಕೊಂಡು ಹೋಗ್ತೀಯ ಕೇಳುತ್ತಿದ್ದರು. ಕೊನೆಗೂ ಅದು ಸೇರಿ ಬಂದು ಮೂರು ವಾರದ ಟೂರ್ ಪ್ಲಾನ್ ಮಾಡಿ ಹೊರಟಿದ್ದರು. ಎಲ್ಲರೂ ಇತಿಹಾಸ ಶೋಧಕರಾದ್ದರಿಂದ ಯುನೆಸ್ಕೊ ಹೆರಿಟೇಜ್ ತಾಣಗಳನ್ನು ಕವರ್ ಮಾಡುವ ಯೋಜನೆ ಹಾಕಿದ್ದರು. ಮೂರು ಹುಡುಗರು ಜರ್ಮನಿಯವರೇ. ಮತ್ತೊಬ್ಬ ಕೇರಳ ಮೂಲದ ಬೆಂಗಳೂರು ಹುಡುಗನಾದರೂ ಈಗ ಜರ್ಮನಿಯ ಪರ್ಮನೆಂಟ್ ರೆಸಿಡೆನ್ಸ್ ವೀಸಾ ಇರುವವ. ಬಾಲ್ಯದಲ್ಲಿ ಕಂಡ ಬೆಂಗಳೂರಷ್ಟೇ ಅವನಿಗೆ ಗೊತ್ತಿರುವುದು. ಎಲ್ಲ ಗೆಳೆಯರು ಜೊತೆಯಲ್ಲೇ ಹೋಗುವುದೆಂದು ಎರಡು ವರ್ಷದಿಂದ ಅವನೂ ತನ್ನ ಭಾರತ ಭೇಟಿಯನ್ನು ಮುಂದೂಡಿದ್ದ. ಅವಿನಾಶ ಬೆಂಗಳೂರು ತಲುಪಿ ಮೊದಲು ಮಾಡಿದ್ದು ಗೈಡ್ ಬುಕಿಂಗ್. ಗೈಡ್ ವೀರೇಶನನ್ನು ಅವಿನಾಶ ಗೂಗಲ್ ರಿವ್ಯೂಗಳನ್ನು ಓದಿ ಇಂಟರೆಸ್ಟಿಂಗ್ ಪರ್ಸನ್ ಅನಿಸಿ ಫೋನ್ ಮಾಡಿ ಬುಕ್ ಮಾಡಿಕೊಂಡಿದ್ದ. ಹೊರಡುವ ಮೊದಲು ವೀರೇಶನಿಗೆ ಫೋನ್ ಮಾಡಿ ಹತ್ತು ಗಂಟೆ ಹೊತ್ತಿಗೆ ತಲುಪುತ್ತೇವೆ ಅಂದಿದ್ದರೂ ಹಂಪಿ ತಲುಪುವಾಗ ಮಧ್ಯಾಹ್ನ ಸಮೀಪಿಸಿತ್ತು. ವಿದೇಶಿಯರನ್ನು ನೋಡಿ ವೀರೇಶ ಇಂಗ್ಲಿಷಲ್ಲಿ ಮಾತು ಸುರು ಮಾಡಿದ. ದಿಬ್ಬದ ಆವರಣದಿಂದ ಸುತ್ತಲಿನ ಸ್ಥಳಗಳನ್ನು ಮುಗಿಸಿ ಹೊರಡುವ ಹೊತ್ತಿಗೆ ಊಟದ ವೇಳೆ ಮೀರಲು ಸುರುವಾಗಿತ್ತು. ಸ್ವಲ್ಪ ವಾಚಾಳಿ ಅನಿಸಿದರೂ ವೀರೇಶನ ತಿಳಿವಳಿಕೆ, ಸೂಕ್ಷ್ಮತೆ, ಶೈಲಿ ಅವರೆಲ್ಲರನ್ನು ಸೆಳೆದಿದ್ದು ಮಾತ್ರವಲ್ಲ ಅವರೊಳಗೊಬ್ಬನೋ ಎನ್ನುವಂತೆ ಮಾಡಿತ್ತು. ಅವಿನಾಶನಿಗೆ ರಿವ್ಯೂನಲ್ಲಿ ವೀರೇಶನ ಬಗ್ಗೆ, 'ಕೇಳದಿದ್ದರೂ ಅನಗತ್ಯ ವಿವರಣೆ ಕೊಡುತ್ತ ಕಾಲ ಹರಣ ಮಾಡುವವ' ಎಂದು ಕಮೆಂಟ್ ಯಾಕೆ ಹಾಕಿದ್ದಾರೆಂಬುದು ಅರ್ಥವಾಗಲು ಸುರುವಾಗಿ ಅವನ ಬಗ್ಗೆ ಆಪ್ತತೆ ಮೂಡಿತು. ಜೊತೆಗೆ ಇವನನ್ನೆಲ್ಲೊ ನೋಡಿರುವೆನಲ್ಲ ಅನಿಸಲಾರಂಭಿಸಿತು.

ವಿರೂಪಾಕ್ಷ ದೇವಾಲಯದ ಬಳಿ ಬರುವ ಹೊತ್ತಿಗೆ ಸಂಜೆ ಐದೂವರೆ ಕಳೆದಿತ್ತು. ಯಾತ್ರಿಗಳು ಹೆಚ್ಚು ಇಲ್ಲದಿರುವುದು ಅವರಿಗೆ ಅನುಕೂಲವೇ ಆಗಿತ್ತು. ವಿರೂಪಾಕ್ಷ ದೇವಾಲಯದ ಒಳಗೆ ಕಲ್ಲುಕಲ್ಲುಗಳಲ್ಲು ಕೆತ್ತಿರುವ ಅಕ್ಷರಗಳಿಗೆ ಮೊಬೈಲ್ ಲೈಟ್ ಹಿಡಿದು ವಿವರಿಸುತ್ತಿದ್ದ ವೀರೇಶನನ್ನೇ ಮತ್ತೆ ಮತ್ತೆ ಗಮನಿಸುತ್ತಿದ್ದ ಅವಿನಾಶ. ಉಳಿದವರೆಲ್ಲ ಅವನ ವಿವರಣೆ, ಅಲ್ಲಿಯ ಕೆತ್ತನೆಯನ್ನು ಗಮನಿಸುವುದರಲ್ಲಿ ಮುಳುಗಿದಂತೆ ಅವಿನಾಶನಿಗೆ ತನ್ಮಯತೆ ಸಾಧಿಸಲು ಸಾಧ್ಯವಾಗಲಿಲ್ಲ. ಇವನ ಹಾವಭಾವ ನಿಲುವು ತನಗೆ ಮೊದಲೇ ಪರಿಚಯ ಅನಿಸಲಾರಂಭಿಸಿತ್ತು. ತನ್ನದು ದೇಜಾವು ಇರಬಹುದಾ ಎಂದೂ ಅನುಮಾನ ಬರುವಷ್ಟು ತಲೆ ಕೆಡಲು ಸುರುವಾಗಿತ್ತು. ದೇವಸ್ಥಾನದ ಹಿಂಭಾಗಕ್ಕೆ ಬರುವ ಹೊತ್ತಿಗೆ ತಡೆಯಲಾರದೆ ಥಟ್ಟನೆ ನಿಮ್ಮದು ಯಾವೂರು? ಕೇಳಿದ. ಏಕಾಏಕಿ ವಿಷಯಾಂತರವಾಗುವಂತೆ ಪ್ರಶ್ನೆ ಎದುರಾದ್ದರಿಂದ ಅವಿನಾಶನನ್ನೇ ದಿಟ್ಟಿಸಿದ ವೀರೇಶ.

'ಇನ್ನಾವುದು ಸರ್. ಇದೇ ನಮ್ಮೂರು. ಇಲ್ಲಿಂದ ಮಾರು ದೂರದಲ್ಲೇ ನಮ್ಮ ಹೊಲ ಇದ್ದಿದ್ದು. ಕೋರ್ ಝೋನ್ ಒಳಗೆ ಬಂದಿದ್ದರಿಂದ ಎಲ್ಲ ಬಿಟ್ಟು ಕೊಡಬೇಕಾಯಿತು ಸರ್. ಅದೇ ಒಂದು ದೊಡ್ಡತೆ' ಅಂದ. ಅರಸದೆಯೇ ಅಮೃತಬಳ್ಳಿ ಕಾಲಿಗೆ ತೊಡರಿದಂತಾಯಿತು. 'ಅಂದ್ರೆ, ನೀವು ಯುನೆಸ್ಕೊ ಹೆರಿಟೇಜ್ ಸಂತ್ರಸ್ತರಾ?' ಕೇಳಿದ.

'ಆವಾಗ ಸಮಸ್ಯೆ ಆಗಿದ್ದು ಹೌದು ಸರ್. ಹಾಗಂತ

